# ಹೊಸತು




## ಇಮಾಮಿ ವ್ಯಾಸೋಕೇರ್

ತ್ವಚೆಯ ರಕ್ಷಣೆಗಾಗಿ ಇಮಾಮಿ ವ್ಯಾಸೋಕೇರ್ ಹೊಸ ಉತ್ಪನ್ನಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ತಲೆಯಿಂದ ಹಿಮ್ಮಡಿವರೆಗಿನ ತ್ವಚೆಯನ್ನು ಇದು ರಕ್ಷಣೆ ಮಾಡುತ್ತದೆ ಎನ್ನುತ್ತದೆ ಕಂಪೆನಿ.

ವ್ಯಾಸೋಕೇರ್ ಅಲೋವೆರಾ, ತುಳಸಿ, ಚಾಮೊಮೈಲ್ ಸೇರಿದಂತೆ ಅನನ್ಯವಾದ ಗಿಡಮೂಲಿಕೆ ಅಂಶಗಳಿಂದ ಕೂಡಿರುವ ಉತ್ಪನ್ನಗಳ ಶ್ರೇಣಿಯಾಗಿದೆ. ವ್ಯಾಸೋಕೇರ್ ಜೆಲ್ಲಿ, ಲಿಪ್‌ಬಾಲ್, ಲಿಪ್ ಮಾಯಿಶ್ಚರೈಸರ್, ಟೋಟಲ್ ಮಾಯಿಶ್ಚರೈಸಿಂಗ್ ಲೋಷನ್ ಮುಂತಾದ ಉತ್ಪನ್ನಗಳನ್ನು ಒಳಗೊಂಡಿದೆ. ಬೆಲೆಯೂ ದುಬಾರಿಯೇನಲ್ಲ.

ವಿವರಕ್ಕೆ: 89714 98865




## ವೈರ್‌ಲೆಸ್ ರೂಟರ್

ಅತ್ಯಾಧುನಿಕ ಪ್ರಸಾರ ಸಾಧನಗಳ ನೆಟ್‌ವರ್ಕಿಂಗ್ ಕಂಪೆನಿ ಫಾರ್ಚೂನ್ ಮಾರ್ಕೆಟಿಂಗ್, ಟೆಂಡಾ ವೈರ್‌ಲೆಸ್ ಎನ್ 150 ರೂಟರ್ ಎಂಬ ಹೊಸ ಉತ್ಪನ್ನವೊಂದನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಇದು ವೈರ್‌ಲೆಸ್ ನೆಟ್‌ವರ್ಕ್ ಸಾಧನವಾಗಿದ್ದು, ಯಾತ್ರಿಕರಿಗೆ ಅನುಕೂಲವಾಗಿದೆ. ಇದು ಆಂತರಿಕ ವಿದ್ಯುತ್ ಪೂರೈಕೆಯನ್ನು ಒಳಗೊಂಡಿದ್ದು, ಹಗುರ ಮತ್ತು ಆಕರ್ಷಕವಾಗಿದೆ. ಬಿಸಿನೆಸ್ ಪ್ರವಾಸದ ವೇಳೆ ಇದು ಅತ್ಯಂತ ಸೂಕ್ತವಾದದ್ದು. ಇದು ಬಳಕೆದಾರ ಸ್ನೇಹಿಯಾಗಿದ್ದು, ಸುಲಭವಾಗಿ ಇಂಟರ್ನೆಟ್ ಸಂಪರ್ಕವನ್ನೂ ಒದಗಿಸುತ್ತದೆ. ಬೆಲೆ, ಲಭ್ಯತೆ ಮತ್ತಿತರ ವಿವರಗಳಿಗಾಗಿ: 9810308475




## ಸೋನಿಯಿಂದ ಗೇಮಿಂಗ್ ಸೆಟ್

ಮೊಬೈಲ್ ಮತ್ತು ಇತರ ಎಲೆಕ್ಟ್ರಾನಿಕ್ ಉತ್ಪನ್ನಗಳಿಗೆ ಹೆಸರಾದ ಸೋನಿ ಕಂಪೆನಿ ಇದೀಗ ಅತ್ಯಾಧುನಿಕವಾದ ಗೇಮಿಂಗ್ ಸೆಟ್ ಒಂದನ್ನು ಬಿಡುಗಡೆ ಮಾಡಿದೆ. ಸೋನಿ ಪಿಎಸ್3 ವೀಟಾ ಹೆಸರಿನಲ್ಲಿರುವ ಈ ಸೆಟ್‌ನಲ್ಲಿ ವಿಡಿಯೋ ಗೇಮ್ ಅನ್ನು ಸುಲಭದಲ್ಲಿ ಆಡಬಹುದು. ರೆಕಾರ್ಡಿಂಗ್‌ಗೆ, ಔಟ್‌ಡೋರ್ ಚಿತ್ರೀಕರಣ ಕೂಡ ಮಾಡಬಹುದು. ವನ್ಯಜೀವಿಗಳ ಚಿತ್ರ ಸೆರೆಹಿಡಿಯಬಹುದು, ಕಾಡಿನ ರಹಸ್ಯಗಳನ್ನೂ ಸುಲಭದಲ್ಲಿ ಚಿತ್ರೀಕರಿಸಿ ಖುಷಿ ಪಡಬಹುದು ಎನ್ನುತ್ತದೆ ಕಂಪೆನಿ.

ಬೆಲೆ, ಲಭ್ಯತೆ ಮತ್ತಿತರ ಮಾಹಿತಿಗಾಗಿ: www.geekygadgets.com ಲಾಗ್ ಆನ್ ಆಗಿ.




## ವಿಚಿ ಥರ್ಮಲ್ ಸ್ಪಾ ವಾಟರ್

ಸೌಂದರ್ಯ ಉತ್ಪನ್ನಗಳ ತಯಾರಿಕಾ ಕಂಪೆನಿ ವಿಚಿ ಇದೀಗ ಹೊಸದಾಗಿ ಥರ್ಮಲ್ ಸ್ಪಾ ವಾಟರ್ ಎಂಬ ಹೊಸ ಉತ್ಪನ್ನವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ.

ಇದು ತ್ವಚೆಯನ್ನು ನಯಗೊಳಿಸುತ್ತದೆ. ಉತ್ತಮ ಸುವಾಸನೆಯಿಂದ ಕೂಡಿದ್ದು, ಪ್ರವಾಸದ ವೇಳೆ ಬಳಸಲು ಯೋಗ್ಯವಾಗಿದೆ. ವೈದ್ಯಕೀಯ ತಂತ್ರಜ್ಞಾನವನ್ನು ಇಲ್ಲಿ ಬಳಸಲಾಗಿದೆ ಎನ್ನುತ್ತದೆ ಕಂಪೆನಿ. ಎಲ್ಲ ಪ್ರಮುಖ ಮಳಿಗೆಗಳಲ್ಲಿ ಲಭ್ಯ. 50 ಎಂಎಲ್ ಪ್ಯಾಕ್ ಬೆಲೆ ₹ 350.

ವಿವರಕ್ಕೆ: www.vichyin-dia.com